**ದಿನಾಂಕಃ 25.08.2022**
**ಸ್ಪೆಷಲ್ ಕೇಸ್ ನಂ. 54/2019**
**ಪ್ರಾಸಾಃ 1**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದಃ**

ನಾನು ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಈಗಲು ಸಹ ಬೋವಿ ಸಮಾಜದ ಅಧ್ಯಕ್ಷ. ಈ ಹಿಂದೆ ಕಲ್ಲುಕೋರೆಗೆ ಸಂಬಂಧಪಟ್ಟಂತೆ ಒಂದು ಅನುಚಿತ್, ಕಿರಣ ಮತ್ತು ಇತರರ ಮೇಲೆ ಒಂದು ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿದೆ. ನಾನು ಪೊಲೀಸರಿಗೆ ಫೋನ್ ಮಾಡಿ ಸದರಿ ಕೇಸು ದಾಖಲು ಮಾಡಲು ಹೇಳಿದ ಕಾರಣ ಪ್ರಕರಣ ದಾಖಲಾಗಿದೆ. ನಾನು ಬೋವಿ ಸಮಾಜದ ಅಧ್ಯಕ್ಷನಾದ ಕಾರಣ ನನ್ನ ಒತ್ತಾಯದ ಮೇರೆಗೆ ಪ್ರಕರಣ ದಾಖಲಾಗಿದೆ ಅಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಟ್ರಾಸಿಟಿ ಕೇಸುಗಳು ದಾಖಲಾದರೆ ಸರ್ಕಾರದಿಂದ ಪರಿಹಾರ ದೊರೆಯುವ ವಿಷಯ ನನಗೆ ಗೊತ್ತಿಲ್ಲ, ಆದರೆ ನನಗೆ ಪರಿಹಾರ ಬಂದಿರುತ್ತದೆ. ನಾಗರಾಜುರವರ ಕೇಸಿನಲ್ಲಿ ಸಹ ಅವರಿಗೆ ಪರಿಹಾರ ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮೇಲು ಸಹ ಭಾರತೀಯ ದಂಡ ಸಂಹಿತೆ ಕಲಂ 307 ರಡಿಯಲ್ಲಿ ಒಂದು ಪ್ರಕರಣ ದಾಖಲಾಗಿ ನಾನು ಸ್ವಲ್ಪ ಕಾಲ ಜೈಲಿನಲ್ಲಿ ಇದ್ದೆ ಅಂದರೆ ಸರಿ. ನನ್ನ ಮೇಲೆ ಒಂದು ಕೇಸು ಇರುತ್ತದೆ. ನಾನು ಹುಟ್ಟಿದಾಗಿನಿಂದ ಆರೋಪಿಯ ಪರಿಚಯ ಇದೆ. ಆರೋಪಿಯ ಹೆಂಡತಿ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ವಿಷಯ ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಪರಿಶಿಷ್ಟ ಜಾತಿಗೆ ಸಂಬಂಧಪಟ್ಟವರು ಅಂದರೆ ನನಗೆ ಗೊತ್ತಿಲ್ಲ. ನಾನು ಗ್ರಾಮಪಂಚಾಯತಿ ಚುನಾವಣೆಗೆ ಯಾವತ್ತು ಸ್ಪರ್ಧಿಸಿರುವುದಿಲ್ಲ. ಮೊದಲ ಬಾರಿಗೆ ಆರೋಪಿ ಜೆನ್ ಕಾರಿನಲ್ಲಿ ಬಂದು ನನ್ನನ್ನು ಉದ್ದೇಶಿಸಿ ಬೈದಿದೆ ಎನ್ನಲಾದ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿರುವುದಿಲ್ಲ. ಕಕ್ಕೆ ಹೊಳೆಯಿಂದ ಪೊಲೀಸ್ ಠಾಣೆಗೆ

ಸುಮಾರು ಅರ್ಧ ಕಿ.ಮೀ. ದೂರ ಇರಬಹುದು. ಕಕ್ಕೆ ಹೊಳೆ ಅಂದರೆ ಆರೋಪಿ ಮೊದಲು ನನಗೆ ಬೈದಿದ್ದಾನೆ ಎಂದು ಹೇಳಲಾದ ಜಾಗ. ಆರೋಪಿ ಮೆದಲ ಬಾರಿಗೆ ನನಗೆ ಬೈದಿದ್ದಾರೆ ಎಂದು ಹೆಳುವ ಸಂದರ್ಭದಲ್ಲಿ ಪೊಲೀಸರಿಗೆ ದೂರು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈ ಘಟನೆ ಆಗಿದೆ ಎಂದು ಹೇಳಲಾದ ಸಂದರ್ಭದಲ್ಲಿ ನಾನೇ ಆರೋಪಿಗೆ ಫೋನು ಮಾಡಿದ್ದೆ ಅಂದರೆ ಸರಿ. ಆರೋಪಿ ತಾನಾಗಿಯೇ ನನಗೆ ಫೋನ್ ಮಾಡಿರಲಿಲ್ಲ. ಆರೋಪಿ ತಾನಾಗಿಯೇ ನನಗೆ ಫೋನ್ ಮಾಡಿ ಇಂತಹ ಕಡೆಗೆ ಬರಬೇಕು ಎಂದು ಕರೆದಿರುವುದಿಲ್ಲ. ಆರೋಪಿ ತಾನಾಗಿಯೇ ನನಗೆ ಫೋನ್ ಮಾಡಿರಲಿಲ್ಲ.

ಕಕ್ಕೆ ಹೊಳೆಯಿಂದ ಪೆಟ್ರೋಲ್ ಬಂಕ್ ಗೆ ಸುಮಾರು 20 ಅಡಿ ದೂರ ಇದೆ. ಘಟನೆ ಆಗಿದೆ ಎನ್ನುವ ಸ್ಥಳ ಮಡಿಕೇರಿ ಸೋಮವಾರಪೇಟೆ ರಸ್ತೆ ಇರುತ್ತದೆ. ಪೆಟ್ರೋಲ್ ಬಂಕ್ ನಾನು ನಿಂತ ಸ್ಥಳದ ಎದುರು ಇದೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಸಿ.ಸಿ.ಟಿ.ವಿ., ಕ್ಯಾಮರಾ ಇದೆಯೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ. ಪೆಟ್ರೋಲ್ ಬಂಕ್ ಇರುವ ಜಾಗ ಸಾರ್ವಜನಿಕ ಸ್ಥಳ ಅಂದರೆ ಸರಿ. ನಮ್ಮ ಮನೆಯಿಂದ ಗಣಪತಿಯವರ ಮನೆಗೆ ನಡೆದು ಹೋದರೆ 5 ನಿಮಿಷ ಬೇಕಾಗುತ್ತದೆ. ನಮ್ಮ ಮನೆಯಿಂದ ರಾಜಣ್ಣನವರ ಮನೆಗೆ ಸಹ 5 ನಿಮಿಷದ ದೂರ ಇದೆ. ರಾಜಣ್ಣನವರ ಅಂಗಡಿಯ ಕೆಳಗೆ ಆರೋಪಿಯ ಮನೆ ಇದೆ. ಆರೋಪಿ ನನ್ನ ಮನೆಗೆ ಯಾವತ್ತು ಬಂದಿರಲಿಲ್ಲ. ಆರೋಪಿ ನನಗೆ ಬೈದಿರುತ್ತಾನೆ ಎಂದು ಹೇಳುಲಾಗುವ ಮೊದಲೇ ನಾನು ಚಿಕನನ್ನು ತೆಗೆದುಕೊಂಡಿದ್ದೆನು. ನಾನು ಮೊದಲ ಬಾರಿಗೆ ಪೊಲೀಸರಿಗೆ ಹೇಳಿಕೆ ಕೊಡುವಾಗ, "ನಾನು ಅಂಗಡಿಯ ಹತ್ತಿರ ಬರುವಾಗ ಅಲ್ಲಿಗೆ ಗಣಪತಿಯವರು ಬಂದಿದ್ದು ನೀನು ಏಕೆ ನನಗೆ ಜಾತಿ ನಿಂದನೆ ಮಾಡಿದ್ದೀರಿ ಎಂದು ಕೇಳಿದಾಗ" ಎಂದು ಹೇಳಿಕೆ ಕೊಟ್ಟಿದ್ದೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಪ್ರಥಮ ಚಿಕಿತ್ಸೆ ಸಹ ಆಗದಿದ್ದ ಕಾರಣ ನಾನು ತುರ್ತಾಗಿ ಹೇಳಿಕೆ ಕೊಡಬೇಕಾಗಿ ಬಂದ ಕಾರಣ ಆ ರೀತಿಯಾಗಿ ಹೇಳಿಕೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ನೇರವಾಗಿ ನಿಂತು ಎದೆಗೆ ಗುಂಡು

ಹೊಡೆದಿರುತ್ತಾರೆ. ಆರೋಪಿ 10 ರಿಂದ 15 ಅಡಿ ದೂರದಿಂದ ನನಗೆ ಗುಂಡು ಹೊಡೆದಿದ್ದಾರೆ. ನನ್ನ ಬೆನ್ನ ಹಿಂದಿನಿಂದ ಚಿಲ್ಲು ಹೊರಗೆ ಬಂದಿರಲಿಲ್ಲ. ನನಗೆ ಗುಂಡು ನೇರವಾಗಿ ಎದೆಗೆ ತಾಗಿಲ್ಲ, ಅದು ಓರೆಯಾಗಿ ಭುಜದ ಮೂಲಕ ಹೊರಗೆ ಹೋಗಿದೆ ಅಂದರೆ ಸಾಕ್ಷಿ ಆ ಗುಂಡು ನನ್ನ ಎದೆಗೆ ತಾಗಿ ಬಲಭಾಗದ ಬದಿಗೆ ಹೋಗಿದೆ ಎಂದು ನುಡಿಯುತ್ತಾರೆ.

ಆರೋಪಿಗೆ ಹಚ್ಚಿನಾಡು ಎಂಬಲ್ಲಿ ತೋಟ ಇದೆ ಅಂದರೆ ನನಗೆ ಗೊತ್ತಿಲ್ಲ. ಹಚ್ಚಿನಾಡು ಬಳಿಯಲ್ಲಿ ಆನೆಯ ಕಾಟ ಜಾಸ್ತಿ ಇದ್ದ ಕಾರಣ ಆರೋಪಿ ಯಾವಾಗಲು ತನ್ನ ಜೊತೆಗೆ ಕೋವಿ ಇಟ್ಟುಕೊಂಡಿರುತ್ತಾರೆ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಗ್ರಾಮ ಪಂಚಾಯತಿ ಸದಸ್ಯ ಅಂದರೆ ಸರಿ. ಆರೋಪಿ ಸುಮಾರು ವರ್ಷಗಳಿಂದ ರಾಜಕೀಯದಲ್ಲಿ ಇದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಕಾರಿನ ಒಳಗೆ ಇದ್ದ ಬಂದೂಕನ್ನು ಒಬ್ಬ ವ್ಯಕ್ತಿ ಹೊರಗಿನಿಂದ ಫೋರ್ಸ್ ಆಗಿ ಕಿತ್ತುಕೊಳ್ಳುವಾಗ ಮಿಸ್ ಫಯರ್ ಆದರೆ ನನಗೆ ಆದಂತಹ ಗಾಯಗಳು ಆಗುತ್ತವೆ ಅಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ರಾಜಣ್ಣನ ಅಂಗಡಿಯ ಹತ್ತಿರ ಇದ್ದ ಕಟ್ಟೆಯ ಮೇಲೆ ನಿಂತು ನಾನು ಫೋನ್ ಮಾಡಿದ ಬಳಿಕ ಆರೋಪಿ ಅಲ್ಲಿಗೆ ಬಂದರು. ಆರೋಪಿ ತನ್ನ ಕಾರನ್ನು ಅಂಗಡಿಯ ಎದರು ಇರುವ ಲೈಟ್ ಕಂಬದ ಬಳಿ ನಿಲ್ಲಿಸಿದ್ದರು. ಆರೋಪಿ ನನ್ನ ಬಳಿ ಬರುವಾಗ ಅವರ ಕೈಯಲ್ಲಿ ಕೋವಿ ಇರಲಿಲ್ಲ. ಆ ಸಂದರ್ಭದಲ್ಲಿ ನಾನು ಒಬ್ಬನೇ ಇದ್ದೆ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx

1 ನೇ ಹೆಚ್ಚುವರಿ ಜಿಲ್ಲಾಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.